ಸಮಗ್ರ ಶಿಕ್ಷಣ-ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01.

ಸಂಖ್ಯೆ: ಎಸ್.ಎಸ್.ಕೆ/ಗು.ಖಾ/ನಲಿ-ಕಲಿ/ಯುನಿಸೆಫ್.ಇ.ನಲಿ-ಕಲಿ/2019-20. ದಿನಾಂಕ: 23-09-2020

# ಸುತ್ತೋಲೆ

**ವಿಷಯ :** **2020-21ನೇ ಸಾಲಿಗೆ ಸಂಬಂಧಿಸಿದಂತೆ ಸರ್ಕಾರಿ ಪ್ರಾಥಮಿಕ ಶಾಲೆಗಳ 'ಕನ್ನಡ ಮತ್ತು ಉರ್ದು ಮಾಧ್ಯಮ'ದ ಎಲ್ಲಾ ನಲಿ-ಕಲಿ ಘಟಕಗಳ ಶಿಕ್ಷಕರಿಗೆ *'English Nali-Kali Class-01'*ರ ತರಬೇತಿಯನ್ನು ಡಿ.ಎಸ್.ಇ.ಆರ್.ಟಿ ಉಸ್ತುವಾರಿಯಲ್ಲಿ ಬ್ಲಾಕ್‌ಹಂತಗಳಲ್ಲಿ ಆಯೋಜಿಸುವ ಕುರಿತು.**

**ಉಲ್ಲೇಖ :**
1. **ದಿನಾಂಕ: 04.08.2020 ರಂದು ಡಿ.ಎಸ್.ಇ.ಆರ್.ಟಿ ನಿರ್ದೇಶಕರು ಮತ್ತು ಎಸ್.ಎಸ್.ಕೆ ಅಧಿಕಾರಿಗಳೊಡನೆ ಚರ್ಚಿಸಿ, ನಿರ್ಣಯಿಸಿದಂತೆ.**
2. **ಡಿ.ಎಸ್.ಇ.ಆರ್.ಟಿ ಪತ್ರಸಂಖ್ಯೆ:ಎಸ್.ಎಸ್.ಎ/2020-21/ಅನುದಾನ ಬಿಡುಗಡೆ/01/2020-21. ದಿನಾಂಕ: 11.08.2020.**
3. **ಸಂಖ್ಯೆ:ಎಸ್.ಎಸ್.ಕೆ/ಗು.ಖಾ/ನಲಿ-ಕಲಿ/ಯುನಿಸೆಫ್.ಇ.ನಲಿ-ಕಲಿ/2019-20.ದಿನಾಂಕ:13.08.20**

* * * * * * *

ಪ್ರಸಕ್ತ 2020-21ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳ 'ಕನ್ನಡ ಮತ್ತು ಉರ್ದು ಮಾಧ್ಯಮ'ದ ನಲಿ-ಕಲಿ ಘಟಕಗಳ ಶಿಕ್ಷಕರಿಗೆ 'English Nali-Kali Class-01'ರ ತರಬೇತಿ ನೀಡುವುದನ್ನು ಆದ್ಯತೆಯ ಅಂಶವಾಗಿ ಪರಿಗಣಿಸಿದೆ. ಉಲ್ಲೇಖ:(03)ರಂತೆ ಡಯಟ್‌ನ ನೋಡಲ್ ಅಧಿಕಾರಿಗಳನ್ನು ಒಳಗೊಂಡಂತೆ ಒಟ್ಟು 1,100 ಮಂದಿ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ 05 ದಿನಗಳ ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯಮಟ್ಟದ ತರಬೇತಿಯನ್ನು ಸಹ ಈಗಾಗಲೇ ನೀಡಲಾಗಿರುತ್ತದೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ನಲಿಕಲಿ ಘಟಕಗಳ ಎಲ್ಲಾ ಶಿಕ್ಷಕರಿಗೆ ಬ್ಲಾಕ್‌ಮಟ್ಟದಲ್ಲಿ ಮುಖಾಮುಖಿ ತರಬೇತಿಯನ್ನು ಡಿ.ಎಸ್.ಇ.ಆರ್.ಟಿ. ಸಂಸ್ಥೆಯ ಉಸ್ತುವಾರಿಯೊಂದಿಗೆ ಆಯೋಜಿಸಲು ಮತ್ತು ತರಬೇತಿ ಶೀರ್ಷಿಕೆ ಅಡಿಯಲ್ಲಿ ಈಗಾಗಲೇ ಗುರುತಿಸಿರುವ ಅನುದಾನವನ್ನು ಎಲ್ಲಾ 34 ಡಯಟ್‌ಗಳಿಗೂ ಬಿಡುಗಡೆ ಮಾಡುವ ಮೂಲಕ ಸೂಕ್ತ ಕ್ರಮವಹಿಸುವಂತೆ ತಿಳಿಸಿದ್ದು, ಇದಕ್ಕಾಗಿ ಅಗತ್ಯವಿರುವ ಹೆಚ್ಚುವರಿ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುವುದು. ಬ್ಲಾಕ್ ಹಂತದ ಶಿಕ್ಷಕರ ತರಬೇತಿಯನ್ನು **ದಿನಾಂಕ:05.10.2020 ರಿಂದ ಆರಂಭಿಸಿ ದಿನಾಂಕ:20.12.2020** ರೊಳಗಿನ ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಕ್ರಮವಹಿಸತಕ್ಕದ್ದು.

## 1. ಬ್ಲಾಕ್ ಹಂತದ ಶಿಕ್ಷಕರ ತರಬೇತಿ ಆಯೋಜನೆಗೆ ಅಗತ್ಯ ಕ್ರಮಗಳು

✓ ಬ್ಲಾಕ್‌ಹಂತದಲ್ಲಿ ನಲಿ-ಕಲಿ ಘಟಕಗಳ ಎಲ್ಲಾ ಶಿಕ್ಷಕರಿಗೂ 'ಇಂಗ್ಲಿಷ್ ನಲಿ-ಕಲಿ ತರಗತಿ-01'ರ ತರಬೇತಿಯನ್ನು ಕಡ್ಡಾಯವಾಗಿ ಆಯೋಜಿಸುವುದು. ಸದರಿ ಬೋಧನಾ ಕಲಿಕಾ ಪದ್ಧತಿಯು

ನೂತನವಾಗಿದ್ದು, ಕಲಿಕಾ ಸಾಮಗ್ರಿಗಳ ಲಭ್ಯತೆ, ಅವಕಾಶ ಮತ್ತು ಬಳಕೆಯ ಅಂಶಗಳು ಪರಿಚಿತವಲ್ಲದ ಕಾರಣ ಬ್ಲಾಕ್‌ಹಂತದ ಶಿಕ್ಷಕರ ತರಬೇತಿಗಳು ಮುಖಾಮುಖಿ ವಿಧಾನದಲ್ಲಿಯೇ ಆಯೋಜನೆಗೊಳ್ಳಲಿ.

- ✓ ಕೋವಿಡ್-19ರ ಹಿನ್ನೆಲೆಯಲ್ಲಿ ಬ್ಲಾಕ್‌ನ ಒಟ್ಟು ನಲಿ-ಕಲಿ ಘಟಕಗಳ ಶಿಕ್ಷಕರ ಸಂಖ್ಯೆಯನ್ನು ಆಧರಿಸಿ, ಒಂದು ಬ್ಯಾಚ್‌ಗೆ 20/25ರ ಸಂಖ್ಯೆ ಇರುವಂತೆ ಅವರ ಸಂಖ್ಯೆಯನ್ನು ಮಿತಿಗೊಳಿಸುವುದು. ಒಂದು ತರಬೇತಿಯ ಸಂದರ್ಭಕ್ಕೆ 02 ಬ್ಯಾಚ್‌ಗಳನ್ನು ಮಾಡಿಕೊಳ್ಳುತ್ತಾ, ಏಕಕಾಲದಲ್ಲಿಯೇ ಪ್ರತ್ಯೇಕ ಕೊಠಡಿಗಳಲ್ಲಿ ತರಬೇತಿಯನ್ನು ನಿರ್ವಹಿಸುವುದು. ಅಂದರೆ, ಒಂದು ತರಬೇತಿಯಲ್ಲಿ ಒಟ್ಟು 40/50 ಮಂದಿ ಶಿಕ್ಷಕರು 02 ಬ್ಯಾಚ್‌ಗಳಲ್ಲಿ ಪ್ರತ್ಯೇಕವಾಗಿ ಭಾಗವಹಿಸುತ್ತಾರೆ ಎಂದರ್ಥ.

- ✓ ಆಯ್ಕೆ ಮಾಡಲಾದ ಬ್ಲಾಕ್‌ನ ಎಲ್ಲಾ ನಲಿ-ಕಲಿ ಘಟಕಗಳ ಶಿಕ್ಷಕರಿಗೆ ಜಿಲ್ಲಾ ಹಂತದಲ್ಲಿ 05 ದಿನಗಳ ಕಾಲ ವಿಡಿಯೋ ಕಾನ್ಫರೆನ್ಸ್ ಮೂಲಕ ತರಬೇತಿ ಪಡೆದ ಆಯಾಯ ಬ್ಲಾಕ್‌ನ ಒಟ್ಟು 05 ಮಂದಿ ಸಂಪನ್ಮೂಲ ವ್ಯಕ್ತಿಗಳ ನೆರವಿನೊಂದಿಗೆ ಎಲ್ಲಾ ನಲಿ-ಕಲಿ ಘಟಕಗಳ ಶಿಕ್ಷಕರ ತರಬೇತಿಯನ್ನು ಪೂರ್ಣಗೊಳಿಸುವಂತೆ ಕ್ರಮವಹಿಸತಕ್ಕದ್ದು.

- ✓ ಅಗತ್ಯ/ವಿಶೇಷ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳ ಲಭ್ಯತೆ ಸಾಧ್ಯವಾಗದಿದ್ದಲ್ಲಿ/ಹೆಚ್ಚುವರಿ ಅಗತ್ಯವಿದ್ದಲ್ಲಿ/ಭೌತಿಕ ಗುರಿಗೆ ಅನುಗುಣವಾಗಿ ಜಿಲ್ಲಾ ಹಂತದಲ್ಲಿನ 03 ಮಂದಿ ಎಂ.ಆರ್.ಪಿಗಳ ನೆರವನ್ನು ಸಹ ಪಡೆಯಬಹುದು.

- ✓ ತರಬೇತಿ ನೀಡುವ ಸಂದರ್ಭಕ್ಕೆ ಸಂಪನ್ಮೂಲ ವ್ಯಕ್ತಿಗಳು ನಲಿ-ಕಲಿ ಇಂಗ್ಲಿಷ್ ತರಗತಿ-01ರ ಸಾಮಗ್ರಿಗಳನ್ನು ಕಡ್ಡಾಯವಾಗಿ ಬಳಸತಕ್ಕದ್ದು. ಸದರಿ ವಿಷಯದ ಸಾಮಗ್ರಿಗಳು ಕರ್ನಾಟಕ ಪಠ್ಯಪುಸ್ತಕ ಸಂಘದ ವತಿಯಿಂದ ಸರಬರಾಜುಗೊಳ್ಳುತ್ತಿದ್ದು, ತರಬೇತಿ ಕಾಲಕ್ಕೆ ಎಲ್ಲಾ ಶಾಲೆಗಳಿಗೂ ಇವು ಲಭ್ಯವಾಗುತ್ತಿರುವುದರಿಂದ ತರಬೇತಿಗೆ ಆಗಮಿಸುವ ಶಿಕ್ಷಕರು ಜೊತೆಯಲ್ಲಿಯೇ ಕಲಿಕಾ ಸಾಮಗ್ರಿಗಳನ್ನು ತರಬೇತಿ ಕೇಂದ್ರಕ್ಕೆ ತರುವಂತೆ ಜ್ಞಾಪನದಲ್ಲಿ ನಿರ್ದೇಶಿಸುವುದು.

- ✓ ಒಂದು ವೇಳೆ ನಲಿ-ಕಲಿ ಇಂಗ್ಲಿಷ್ ಸಾಮಗ್ರಿಗಳು ಲಭ್ಯವಾಗದಿದ್ದಲ್ಲಿ, ಈಗಾಗಲೇ ಪ್ರತೀ ಬ್ಲಾಕ್‌ನಲ್ಲಿಯೂ ಆಯ್ದ ಕೆಲವು ಶಾಲೆಗಳ ಶಿಕ್ಷಕರು 2019-20ನೇ ಸಾಲಿನಿಂದ ಇದೇ ಬೋಧನಾ ಪದ್ಧತಿಯನ್ನು ಪ್ರಾಯೋಗಿಕವಾಗಿ ಅನುಸರಿಸುತ್ತಿದ್ದು, ಅಂತಹ ಶಾಲೆಗಳಲ್ಲಿರುವ ಕಲಿಕಾ ಸಾಮಗ್ರಿಗಳ ನೆರವನ್ನು ಸಂಪನ್ಮೂಲ ವ್ಯಕ್ತಿಗಳು ಬಳಸಿಕೊಳ್ಳತಕ್ಕದ್ದು. ಈ ಬಾರಿಯೂ ಅದೇ ಶಾಲೆಗಳಿಗೂ ಮತ್ತೊಮ್ಮೆ 1ನೇ ತರಗತಿಗೆ ಹೊಸ ಕಿಟ್‌ಗಳು KTBS ಮೂಲಕ ಸರಬರಾಜುಗೊಳ್ಳುವುದರಿಂದ ಆ ಶಾಲೆಗಳಿಗೆ ಸಾಮಗ್ರಿಗಳನ್ನು ತಕ್ಷಣವೇ ಹಿಮ್ಮರಳಿಸುವ ಅಗತ್ಯತೆ ಕಂಡುಬರುವುದಿಲ್ಲ.

- ✓ *ಈ ಸಂದರ್ಭದಲ್ಲಿ ಭಾಗವಹಿಸುವ ಎಲ್ಲಾ ಶಿಕ್ಷಕರು ಮತ್ತು ಸಂಪನ್ಮೂಲ ವ್ಯಕ್ತಿಗಳು ಕೋವಿಡ್-19ನ ಅಗತ್ಯ ಮುನ್ನೆಚ್ಚರಿಕೆಯೊಂದಿಗೆ ಸಾಮಾಜಿಕ ಅಂತರ, ಕೈಗಳ ಶುಚಿತ್ವ/ವೈಯಕ್ತಿಕ ಸ್ಯಾನಿಟೈಜರ್ ಬಳಕೆ, ಮುಖಗವಸು ಮತ್ತು ಕೈಗವಸು ಕಡ್ಡಾಯ ಧರಿಸುವಿಕೆ, ಉಪಯೋಗಿಸುವ ಕಲಿಕಾ ವಸ್ತುಗಳಲ್ಲಿ ಪರಸ್ಪರ ಎಚ್ಚರ ವಹಿಸುವುದು ಅಗತ್ಯವಾಗಿದ್ದು, ಇದಕ್ಕೆ ಪೂರಕವಾಗಿ ತರಬೇತಿ ಕೇಂದ್ರದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದು.* ಸಾಮಗ್ರಿಗಳ ವ್ಯವಸ್ಥಿತ ಜೋಡಣೆ, ನಿರ್ವಹಣೆ ಹಾಗೂ ತರಗತಿ ಪ್ರಕ್ರಿಯೆ ಕುರಿತಂತೆ ಕೋವಿಡ್-19 ಹಿನ್ನೆಲೆಯಲ್ಲಿ ಬಹು ಎಚ್ಚರಿಕೆಯಿಂದ ಮುಖಾಮುಖಿಯಾಗಿ ತರಬೇತಿಯನ್ನು ಆಯೋಜಿಸುವುದು.

## 2. ಉಪನಿರ್ದೇಶಕರು (ಅಭಿವೃದ್ಧಿ)/ಡಯಟ್ ಪ್ರಾಂಶುಪಾಲರ ಪ್ರಮುಖ ಜವಾಬ್ದಾರಿಗಳು

- ನಲಿ–ಕಲಿ ತರಗತಿ 01ರ ಇಂಗ್ಲಿಷ್ ಭಾಷಾ ಕಲಿಕೆಗಾಗಿ ಅಯೋಜಿಸುತ್ತಿರುವ ಶಿಕ್ಷಕರ ಬ್ಲಾಕ್ ಮಟ್ಟದ ತರಬೇತಿಗೆ ಪ್ರತಿ ಬ್ಲಾಕ್‌ಗೂ ಒಬ್ಬ ಸಮರ್ಥ ನೋಡಲ್ ಅಧಿಕಾರಿಯನ್ನು ನಿಯೋಜಿಸಲು ತುರ್ತು ಕ್ರಮವಹಿಸುವುದು.
- ಎಲ್ಲಾ ಶಿಬಿರಾರ್ಥಿಗಳಿಗೂ ಈಗಾಗಲೇ ಜಿಲ್ಲಾ ಹಂತಕ್ಕೆ ಒದಗಿಸಿರುವ ತರಬೇತಿ ವಿಧಾನಗಳ ಸಾಫ್ಟ್ ಪ್ರತಿಗಳನ್ನು ಹಾರ್ಡ್ ಪ್ರತಿಗಳನ್ನಾಗಿಸಿ ಕಡ್ಡಾಯವಾಗಿ ವಿತರಿಸಲು ಜ್ಞಾಪನದಲ್ಲಿ ತಿಳಿಸತಕ್ಕದ್ದು.
- ಡಿ.ಎಸ್.ಇ.ಆರ್.ಟಿ ಸಂಸ್ಥೆಯ ನಿರ್ದೇಶನದಂತೆ ಬ್ಲಾಕ್ ಮಟ್ಟದ ವಸತಿ ರಹಿತ ಶಿಕ್ಷಕರ ತರಬೇತಿ ನಿಯಮಗಳನ್ನು ಅನುಸರಿಸುವ ಮೂಲಕ ಬಿಡುಗಡೆಯಾದ ಅನುದಾನದ ಬಳಕೆಗೆ ಹಾಗೂ ಉಪಯೋಗಿತ ಪತ್ರಕ್ಕೆ ದಾಖಲೆಗಳನ್ನು ನಿರ್ವಹಿಸುವುದು. ಡಯಟ್‌ನ ಪ್ರಾಂಶುಪಾಲರ ದೃಢೀಕೃತ ಉಪಯೋಗಿತ ಪ್ರಮಾಣ ಪತ್ರ ನಿರ್ವಹಣೆಗೆ ಸೂಕ್ತ ಕ್ರಮ ಅನುಸರಿಸತಕ್ಕದ್ದು.
- ಎಲ್ಲಾ ಬಿ.ಇ.ಓ & ಬಿ.ಆರ್.ಸಿ.ಗಳೊಂದಿಗೆ ಪೂರ್ವಭಾವಿಯಾಗಿ ಸಭೆ ಆಯೋಜಿಸಿ, ನಲಿಕಲಿ ಘಟಕಗಳ ಬ್ಲಾಕ್ ಮಟ್ಟದ ಶಿಕ್ಷಕರ ತರಬೇತಿ ಆಯೋಜನೆಗೆ ಅಗತ್ಯ ಮೇಲ್ವಿಚಾರಣೆ ಕೈಗೊಳ್ಳುವುದು. ಸಾಮಾಜಿಕ ಅಂತರದ ಅಡಿಯಲ್ಲಿ ಶಿಕ್ಷಕರ ನಿಯೋಜನೆಯ ಸಂಖ್ಯೆಯನ್ನು ಮಿತಗೊಳಿಸಿ ಏಕಕಾಲದಲ್ಲಿ ಎರಡೆರಡು ಬ್ಯಾಚ್‌ಗಳ ಮೂಲಕ ಶಿಕ್ಷಕರ ತರಬೇತಿಗೆ ಕ್ರಮವಹಿಸಲು ಪ್ರತೀ ಬ್ಲಾಕ್ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವಂತೆ ಹಾಗೂ ಅದನ್ನು ಪರಿಶೀಲಿಸಿ ಕಾರ್ಯರೂಪಕ್ಕೆ ತರಲು ಕ್ರಮವಹಿಸತಕ್ಕದ್ದು.
- ಜಿಲ್ಲಾ/ಬ್ಲಾಕ್ ಹಂತದ **'ಇಂಗ್ಲಿಷ್ ನಲಿ–ಕಲಿ ತರಗತಿ–01'**ರ ಆಯೋಜನೆ ಪೂರ್ಣಗೊಂಡ ನಂತರ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಡಯಟ್ ಹಂತದಲ್ಲಿ ಈ ಬಗ್ಗೆ ಸಮಗ್ರ ವರದಿಯನ್ನು ಸಿದ್ಧಪಡಿಸಿ ದೃಢೀಕರಿಸಿದ ಸಾಫ್ಟ್ ಪ್ರತಿಯನ್ನು ಉಪಯೋಗಿತ ಪ್ರಮಾಣ ಪತ್ರ/UC ಸಹಿತ ಡಿ.ಎಸ್.ಇ.ಆರ್.ಟಿ.ಗೂ ಹಾಗೂ ಕಾರ್ಯಕ್ರಮದ ವರದಿಯನ್ನು ಮಾತ್ರ ಸಮಗ್ರ ಶಿಕ್ಷಣ–ಕರ್ನಾಟಕದ ನಲಿ–ಕಲಿ ಕೋಶದ ಇ–ಮೇಲ್ ವಿಳಾಸಕ್ಕೂ (ssaqanalikali@gmail.com) ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

## 3. ಡಿ.ಎಸ್.ಇ.ಆರ್.ಟಿ ಶೈಕ್ಷಣಿಕ ಸಂಸ್ಥೆಯ ಪ್ರಮುಖ ಜವಾಬ್ದಾರಿಗಳು

- ಉಪನಿರ್ದೇಶಕರು (ಅಭಿವೃದ್ಧಿ)/ಡಯಟ್ ಪ್ರಾಂಶುಪಾಲರು ಸೂಕ್ತ ಮೇಲ್ವಿಚಾರಣೆಯೊಂದಿಗೆ ಬ್ಲಾಕ್ ಹಂತದ ತರಬೇತಿಯನ್ನು ವ್ಯವಸ್ಥಿತವಾಗಿ ಸಂಘಟಿಸುವಂತೆ ಜಿಲ್ಲಾ ಹಂತದಲ್ಲಿ ಕ್ರಿಯಾಯೋಜನೆ ರೂಪಿಸಿ ಅನುಷ್ಠಾನಿಸಲು ಮತ್ತು ಸದರಿ ಕಾರ್ಯಕ್ರಮಕ್ಕಾಗಿ ಬ್ಲಾಕ್‌ವಾರು ನೋಡಲ್ ಅಧಿಕಾರಿಗಳನ್ನು ನಿಯೋಜಿಸುವ ಮೂಲಕ ತರಬೇತಿ ಅನುಷ್ಠಾನಕ್ಕೆ ಕ್ರಮವಹಿಸುವಂತೆ ಎಲ್ಲಾ 34 ಡಯಟ್‌ಗಳನ್ನು ತಮ್ಮ ಹಂತದಲ್ಲಿ ಮೇಲ್ವಿಚಾರಣೆಗೆ ಒಳಪಡಿಸುವುದು.
- **ದಿನಾಂಕ: 04–08–2020** ರಂದು ಸಮಗ್ರ ಶಿಕ್ಷಣ–ಕರ್ನಾಟಕದಲ್ಲಿ ಸೇವಾ ನಿರತ ತರಬೇತಿ ಅಂಶಗಳ ಅಡಿಯಲ್ಲಿ ಅಗತ್ಯ ಹಾಗೂ ಲಭ್ಯ/ಉಳಿಕೆ ಅನುದಾನ ಕುರಿತು ಚರ್ಚಿಸಿ ನಿರ್ಣಯಿಸಿದಂತೆ ಇಂಗ್ಲಿಷ್ ನಲಿ–ಕಲಿ ತರಗತಿ–01ರ ಶಿಕ್ಷಕರ ತರಬೇತಿಯನ್ನು ಕನ್ನಡ ಮತ್ತು ಉರ್ದು ಮಾಧ್ಯಮದ ಎಲ್ಲಾ ನಲಿ–ಕಲಿ

ಘಟಕಗಳ ಶಿಕ್ಷಕರಿಗೆ ಲಭ್ಯವಾಗುವಂತೆ ಸಕಲ ಸಿದ್ಧತೆಗಳೊಂದಿಗೆ ವ್ಯವಸ್ಥಿತವಾಗಿ ಆಯೋಜಿಸಿ ಮೇಲ್ವಿಚಾರಣೆಗೊಳಿಸುವುದು.

- ತರಬೇತಿ ಸಂದರ್ಭಕ್ಕೆ ಕೋವಿಡ್ ಸೋಂಕಿತ/ಪ್ರಾಥಮಿಕ/ಸೆಕೆಂಡರಿ ಸಂಪರ್ಕಕ್ಕೆ ಒಳಗಾಗಿರುವ ಶಿಕ್ಷಕರ ಪೂರ್ವ ಮಾಹಿತಿ ಇದ್ದಲ್ಲಿ/ಆ ಕ್ಷಣಕ್ಕೆ ದೊರೆತಲ್ಲಿ ತರಬೇತಿಯ ಕೇಂದ್ರ ಸ್ಥಳಕ್ಕೆ ಅವರ ಹಾಜರಿಯನ್ನು ನಿಷೇಧಿಸುವಂತೆ ಕ್ರಮ ರೂಪಿಸುವುದು. ತರಬೇತಿ ಪೂರ್ವ, ಅವಧಿ, ನಂತರದವರೆಗೂ ಜಿಲ್ಲಾ/ಬ್ಲಾಕ್ ಹಂತದ ಅಧಿಕಾರಿಗಳು ಈ ಬಗ್ಗೆ ನಿರಂತರ ಮೇಲ್ವಿಚಾರಣೆಯನ್ನು ಕೈಗೊಳ್ಳುವಂತೆ ಬ್ಲಾಕ್ ನೋಡಲ್ ಅಧಿಕಾರಿಗಳ ಉಸ್ತುವಾರಿಯಲ್ಲಿ ಉಪನಿರ್ದೇಶಕರು (ಅಭಿವೃದ್ಧಿ) ಇವರು ಅಗತ್ಯ ಕ್ರಮವಹಿಸುವಂತೆಯೂ ಮತ್ತು ಬಿ.ಇ.ಓ ಮತ್ತು ಬಿ.ಆರ್.ಸಿ.ಗಳು ಬ್ಲಾಕ್ ಹಂತದ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಪಡೆದು ಅನುಪಾಲನೆ ಕೈಗೊಳ್ಳುವಂತೆಯೂ ಕಾರ್ಯ ತಂತ್ರಗಳನ್ನು ಅಳವಡಿಸಿಕೊಳ್ಳತಕ್ಕದ್ದು.

ತರಗತಿ–01ರ ಇಂಗ್ಲಿಷ್ ಭಾಷಾ ಕಲಿಕಾ ಪ್ರಕ್ರಿಯೆಯನ್ನು ನಲಿಕಲಿ ಕಲಿಕಾ ಪದ್ಧತಿಗೆ ಅಳವಡಿಸುವ ಕಾರ್ಯಕ್ರಮವು ಕರ್ನಾಟಕ ರಾಜ್ಯದ ಬಹು ನಿರೀಕ್ಷಿತ ಹಾಗೂ ನಾವೀನ್ಯಯುತ ಶೈಕ್ಷಣಿಕ ಕಾರ್ಯಕ್ರಮವಾಗಿದ್ದು, ಕನ್ನಡ ಮತ್ತು ಉರ್ದು ಮಾಧ್ಯಮದ ಎಲ್ಲಾ ನಲಿ–ಕಲಿ ಘಟಕಗಳಲ್ಲಿ ಇದರ ಯಶಸ್ವಿ ಅನುಷ್ಠಾನಕ್ಕೆ ವಿವಿಧ ಹಂತದ ಮೇಲುಸ್ತುವಾರಿ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಕ್ರಮವಹಿಸುವುದಲ್ಲದೇ, ಜಿಲ್ಲಾ ಹಂತದ ಮೇಲ್ವಿಚಾರಣೆಯ ಕ್ರಮಗಳನ್ನು ವಿಶೇಷವಾಗಿ ಅಳವಡಿಸುವ ಮೂಲಕ ಸದರಿ ಕಾರ್ಯಕ್ರಮವನ್ನು ಕಾಲ ಕಾಲಕ್ಕೆ ಅನುಪಾಲನೆಗೆ ಒಳಪಡಿಸಿ, ಲಭ್ಯ ಹಿಮ್ಮಾಹಿತಿಯನ್ನು ಸಂಗ್ರಹಿಸಿ ರಾಜ್ಯ ನಲಿಕಲಿ ಕೋಶಕ್ಕೆ ವರದಿ ಮಾಡುವಂತೆ ನಿರ್ದೇಶಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ–ಕರ್ನಾಟಕ
ಬೆಂಗಳೂರು–01
23/9

**ಪ್ರತಿಯನ್ನು ಗೌರವಪೂರಕವಾಗಿ,**

**ಪ್ರತಿಯನ್ನು ಕ್ರಮಕ್ಕಾಗಿ,**

1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬನಶಂಕರಿ 3ನೇ ಹಂತ, ಬೆಂಗಳೂರು, ಇವರಿಗೆ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ಇವರಿಗೆ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು, ಇವರಿಗೆ.

**ಪ್ರತಿಯನ್ನು ಮಾಹಿತಿಗಾಗಿ,**

1. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಹಾಗೂ ನಿರ್ದೇಶಕರು ಕಲಬುರಗಿ ಮತ್ತು ಬೆಳಗಾವಿ ವಿಭಾಗ ಇವರಿಗೆ.
2. ಮುಖ್ಯ ಲೆಕ್ಕಾಧಿಕಾರಿಗಳು, ಲೆಕ್ಕ ಶಾಖೆ, ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು, ಇವರಿಗೆ.
3. ಯೋಜನಾ ಶಾಖೆ, ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು, ಇವರಿಗೆ.
4. ತರಬೇತಿ ಶಾಖೆ, ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು, ಇವರಿಗೆ.